**ಪಿ.ಡಬ್ಲೂ -1**

ದಿಃ 20-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಐ.ಎಸ್. ರವರಿಂದಃ-**

ನಾನು ಬಿ.ಎ. ವರೆಗೆ ಓದಿರುತ್ತೇನೆ. ನಾನು ರಾಣಿ ಚೆನ್ನಮ್ಮ ನಗರದಲ್ಲಿ ಹಾಗೂ ಉಚ್ಚಂಗಾವ ಗ್ರಾಮದಲ್ಲಿಯೂ ಸಹ ವಾಸವಾಗಿರುತ್ತೇನೆ. ರಾಣಿ ಚೆನ್ನಮ್ಮ ನಗರದಲ್ಲಿ ನನ್ನ ಸ್ವಂತ ಮನೆ ಇದೆ. ನಾನು ರಾಣಿ ಚೆನ್ನಮ್ಮ ನಗರದಲ್ಲಿ 10 ವರ್ಷಗಳಿಂದ ಇದ್ದೇನೆ. ನಾನು ಆರ್ಮಿ ಯಲ್ಲಿ ಕೆಲಸ ಮಾಡುತ್ತಿದ್ದೆ , 2013 ರಲ್ಲಿ ನಿವೃತ್ತಿಯನ್ನು ಹೊಂದಿರುತ್ತೇನೆ . ಈ ದಾವೆಯನ್ನು ದಾಖಲಿಸಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ.

**2.** ನಮ್ಮ ತಂದೆಯ ಹೆಸರು ಲಕ್ಷ್ಮಣ್ ಡೊಂಗ್ರು ದೇವರಮನಿ ಎಂದರೆ ಸರಿ . ನಮ್ಮ ಅಜ್ಜರಾದ ಡೊಂಗ್ರು ರವರಿಗೆ ಇಬ್ಬರು ಮಕ್ಕಳು, ಒಬ್ಬರು ಲಕ್ಷ್ಮಣ್ ಮತ್ತು ಬರ್ಮ ಎಂದರೆ ಸಾಕ್ಷಿಯು ಲಕ್ಷ್ಮಣ್ ಒಬ್ಬರೇ ಎಂದು ನುಡಿಯುತ್ತಾರೆ. ಬರ್ಮ ರವರಿಗೆ ಗಂಗವ್ವ ಎಂಬ ಹೆಂಡತಿ ಇದ್ದರು ಎಂದರೆ ಸರಿಯಲ್ಲ. ಬರ್ಮ ರವರಿಗೆ ಕಲ್ಲವ್ವ ಎಂಬ ಮಗಳು ಇದ್ದಳು ಎಂದರೆ ಸರಿಯಲ್ಲ. ನಮ್ಮ ತಂದೆಯವರಿಗೆ ನಾಲ್ಕು ಜನ ಗಂಡು ಮಕ್ಕಳು , ಅದರಲ್ಲಿ ಇಬ್ಬರು ಮೃತರಾಗಿರುತ್ತಾರೆ, ಇನ್ನಿಬ್ಬರು ಜೀವಂತ ಇದ್ದೇವೆ ಎಂದರೆ ಸರಿ. ಇನ್ನೊಬ್ಬರ ಹೆಸರು ರಾಮ ಎಂದರೆ ಸರಿ.

**3.** ಯಲ್ಲಪ್ಪ ಸಿದ್ದಪ್ಪ ದೇವರಮನಿ ರವರ ಪರಿಚಯ ನನಗೆ ಇಲ್ಲ . ಅದೇ ರೀತಿ ಕುನ್ನಪ್ಪ ಗುಂಡು ದೇವರಮನಿ ರವರ ಪರಿಚಯ ನನಗೆ ಇಲ್ಲ. ವೈಜು ಗೋವಿಂದ ಕಾಂಬ್ಳೆ ಮತ್ತು ನೀಲು ಗೋವಿಂದ ಕಾಂಬ್ಳೆ ನಮಗೆ ಸಂಬಂಧಿಕರು ಎಂದರೆ ಸರಿಯಲ್ಲ. ವೈಜು ಗೋವಿಂದ ಕಾಂಬ್ಳೆ ರವರು ಮೃತರಾಗಿರುತ್ತಾರೆ, ನೀಲು ಗೋವಿಂದ ಕಾಂಬ್ಳೆ ರವರು ಜೀವಂತ ಇರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ವೈಜು ಮತ್ತು ನೀಲು ಗೋವಿಂದ ಕಾಂಬ್ಳೆ ರವರ ಆಸ್ತಿಯು ಬಾಚಿ ಮತ್ತು ಉಚ್ಚಂಗಾವದಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಉಚ್ಚಂಗಾವ ಗ್ರಾಮದಲ್ಲಿ ಸರ್ವೆ ನಂ. 39/3 ಮತ್ತು 40/1 ರ ಆಸ್ತಿಯು ನಮ್ಮ ಮತ್ತು ನೀಲು , ವೈಜು ರವರ ಹೆಸರಿನಲ್ಲಿ ಜಂಟಿಯಾಗಿರುತ್ತವೆ ಎಂದರೆ ಸರಿ. ನಾವು ಮತ್ತು ನೀಲು , ವೈಜು ರವರು ಸಹೋದರರಾಗಿರುವುದರಿಂದ ಜಂಟಿ ಹೆಸರಿನಲ್ಲಿರುತ್ತವೆ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ.

**4.** ದಿನಾಂಕ 12.07.1982 ರಂದು ಬರ್ಮ ಡೊಂಗ್ರು ದೇವರಮನಿ , ಮಾರುತಿ ಲಕ್ಷ್ಮಣ್ ದೇವರಮನಿ, ನಾನು, ಯಲ್ಲಪ್ಪ ಸಿದ್ದಪ್ಪ ದೇವರಮನಿ, ಕುನ್ನಪ್ಪ ಗುಂಡು ದೇವರಮನಿ ನಾವೆಲ್ಲರೂ ಸೇರಿ ದಾವಾ ಷೆಡ್ಯೂಲ್ ಆಸ್ತಿಯನ್ನು ವೈಜು ರವರಿಗೆ ಬಿಟ್ಟುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಹಿರಿಯರ ಸಮಕ್ಷಮದಲ್ಲಿ ಬಾಂಡಿನಲ್ಲಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ದಿನಾಂಕ 12.07.1982 ರಲ್ಲಿ ಬರೆದುಕೊಟ್ಟ ದಾಖಲೆಯ ಪ್ರಕಾರ ವೈಜು ರವರು ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವೈಜು ರವರು ಜೀವಂತವಿರುವವರೆಗೂ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದುಕೊಂಡು ಬಂದಿದ್ದರು, ಅವರು ಮೃತರಾದ ನಂತರ ಅವರ ವಾರಸುದಾರರು ಸ್ವಾಧೀನವನ್ನು ಹೊಂದಿ ವ್ಯವಸಾಯವನ್ನು ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿಯಲ್ಲ.

**5.** ನಮ್ಮ ಮೂಲ ಅಡ್ಡ ಹೆಸರು ಕಾಂಬ್ಳೆ ಎಂದು ಇತ್ತು ಎಂದರೆ ಸರಿಯಲ್ಲ . ಉಚ್ಚಂಗಾವ ಗ್ರಾಮದಲ್ಲಿ ಚಂದಾಯಿ ಎಂದು ನಮ್ಮ ಮನೆ ದೇವರು ಇದೆ ಎಂದರೆ ಸರಿ . ಚಂದಾಯಿ ದೇವರ ಹೆಸರಿನಲ್ಲಿ ನಾವುಗಳು ಟ್ರಸ್ಟ್ ನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ .

ಟ್ರಸ್ಟನಲ್ಲಿ ನಮ್ಮ ತಂದೆಯವರ ಹೆಸರು ಮಹಾರ್ ಮತ್ತು ಕಾಂಬ್ಳೆ ಎಂದು ಇದೆ ಎಂದರೆ ಸರಿಯಲ್ಲ. ಚಂದಾಯಿ ದೇವಸ್ಥಾನದ ಪೂಜೆಯನ್ನು ನಾವೇ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ನಾವು ಚಂದಾಯಿ ದೇವಾಸ್ಥಾನದ ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದರಿಂದ ನಮಗೆ ದೇವರಮನಿ ಎಂದು ಅಡ್ಡ ಹೆಸರು ಬಂದಿರುತ್ತದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**
**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**